# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತ್‌ಹಳ್ಳಿ ಉಪ ವಿಭಾಗ,**
**ಮಹದೇವಪುರ ವಲಯ, ಕೃಷ್ಣಾ ಶೈನ್ ಕಟ್ಟಡ, ಮಾರತ್‌ಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು:560 037.**

ಸಂ: ಬಿಬಿಎಂಪಿ/ಸಕಾಅ/ಮಾಉವಿ/ವಾ86/ಪಿ.ಆರ್/407/2020-21 ದಿನಾಂಕ: 17/02/2021

## ಸಭೆಯ ಆಹ್ವಾನ ಪತ್ರ

ಮಾನ್ಯ ಆಯುಕ್ತರ ಆದೇಶ ಸಂಖ್ಯೆ:ಬಿ12(58)ಪಿ.ಆರ್/35/2020-21, ದಿನಾಂಕ:21.09.2020 ರಂತೆ ವಾರ್ಡ್ ನಂ.86 ಮಾರತ್ತಹಳ್ಳಿ ವ್ಯಾಪ್ತಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:20.02.2021ರಂದು ಶನಿವಾರ ಬೆಳಗ್ಗೆ 11.00 ಘಂಟೆಗೆ ಸರಿಯಾಗಿ ವಾರ್ಡ್ ನಂ.86 ಮಾರತ್ತಹಳ್ಳಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರತ್ತಹಳ್ಳಿ ಉಪವಿಭಾಗ, ಮಹದೇವಪುರ ವಲಯ, ಕೃಷ್ಣಾಶೈನ್ ಕಟ್ಟಡ, ಮಾರತ್ತಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು-37 ಇಲ್ಲಿ ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ನಂ.86ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ಸದಸ್ಯರು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

### -: ಸಭೆಯ ಅಜೆಂಡಾ :-

| | |
|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ -19 ಕ್ಯಾಂಪ್‌ಗಳಲ್ಲಿ ಟೆಸ್ಟ್‌ಗಳ ನಿರ್ವಹಣೆ ಬಗ್ಗೆ. |
| 2 | ವಾರ್ಡ್ ವ್ಯಾಪ್ತಿಯ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ. |
| 3 | ರಾಜಕಾಲುವೆಗಳಲ್ಲಿ ಹೂಳು ತೆಗೆಯುವ ದೂರುಗಳ ಬಗ್ಗೆ. |
| 4 | ಬೀದಿ ದೀಪಗಳ ನಿರ್ವಹಣೆ ಕುರಿತು. |
| 5 | ಬೆಸ್ಕಾಂ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ |
| 6 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ. |
| 7 | ರಸ್ತೆ ಮೂಲಭೂತ ಸೌಕರ್ಯ, ರಸ್ತೆಗಳ ಕುರಿತು. |
| 8 | ಕುಡಿಯುವ ನೀರು ಹಾಗೂ ಒಳಚರಂಡಿ ನಿರ್ಮೂಲನೆ ಕುರಿತು. |
| 9 | ಸಂಚಾರ ದಟ್ಟಣೆಗೆ ಸಂಬಂದಿಸಿದ ವಿಷಯಗಳ ಬಗ್ಗೆ. |
| 10 | ಅರಣ್ಯ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ. |
| 11 | ಪಶುಸಂಗೋಪನಾ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ. |
| 12 | ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ. |
| 13 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು. |

**<u>ಪ್ರತಿಯನ್ನು:-</u>**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರಿಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ ರವರಿಗೆ ಸಲ್ಲಿಸಿದೆ.
5. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ವಿಭಾಗ, ಜಯನಗರ, ಬಿ.ಡಿ.ಎ ಕಾಂಪ್ಲೆಕ್ಸ್ ರವರಿಗೆ ಸಲ್ಲಿಸಿದೆ.
10. ಪಶುಸಂಗೋಪನಾ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
11. ಪರಿಸರ ಇಲಾಖೆ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.
12. ತೋಟಗಾರಿಕೆ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.

13. ಆರಕ್ಷಕ ವೃತ್ತ ನಿರೀಕ್ಷಕರು (ಸಂಚಾರ) ಹೆಚ್.ಎ.ಎಲ್ ರವರಿಗೆ.
14. ಪೋಲೀಸ್ ಅಧಿಕಾರಿಗಳು ಮಾರತ್ತಹಳ್ಳಿ /ಹೆಚ್.ಎ.ಎಲ್ ಪೋಲೀಸ್ ಠಾಣೆ ರವರಿಗೆ.
15. RWA/NGO's Of Marathahalli.
16. ವಾರ್ಡಿನ ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.86 ಮಾರತ್ತಹಳ್ಳಿ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
17. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಮಾರತ್ತಹಳ್ಳಿ /ಯಮಲೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
18. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು ರವರ ಮಾಹಿತಿಗಾಗಿ ಸಲ್ಲಿಸಿದೆ.
19. ಸ್ಥಳೀಯ ಸಂಘ-ಸಂಸ್ಥೆಗಳು.
20. ವಾರ್ಡ್ ಕಛೇರಿ ಪ್ರತಿ.

ಸದಸ್ಯ ಕಾರ್ಯದರ್ಶಿ

ವಾರ್ಡ್ ಕಮಿಟಿ, ವಾರ್ಡ್ ನಂ.86 ಹಾಗೂ
ಸಹಾಯಕ ಅಭಿಯಂತರರು ಮಾರತ್ಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ 20-2-2021 ರಂದು 3ನೇ ಶನಿವಾರ ದಿವಸದಂದು ಬೆಳಿಗ್ಗೆ 11:00 ಗಂಟೆಗೆ ನಿಗದಿಪಡಿಸಿರುವ ವಾರ್ಡ್ ಸಂಜಯನಗರದ ಸೇವೆಗಳನ್ನು ಒದಗಿಸುವ ವಿಧಾನದಲ್ಲಿ ನಾಗರೀಕರು ವಾರ್ಡ್ ಸಂಪರ್ಕದಲ್ಲಿ ಕೆಲಸಗಳನ್ನು ಕರೆದು ವಾರ್ಡ್ ಅಧಿಕಾರಿಗಳು ಮತ್ತು ಇತರೆ ಇಲಾಖಾ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಯಿತು.

ಕ್ರಮ ಸಂಖ್ಯೆ — ಅಧಿಕಾರಿಗಳು/ಸದಸ್ಯರುಗಳು — ಸಹಿ

1) ಅಶೋಕ್. ಟಿ.ಬಿ. (ವಾರ್ಡ್ ಅಧಿಕಾರಿಗಳು) — [signature] 20/2/2021

2) ಶ್ರೀ. ಮಂಜುನಾಥ, ಬಿ.ಕೆ. — [signature]

3) Manjunath (Shettikudre II) — [signature]

4) Mahiboob SHO — [signature]

5) Ramesh T.I ward-86 — [signature]

6) Sadanand (SANJAYNAGAR) — [signature]

7) H. Shobha. (Welfare) 7406183320 — [signature]

8) ಶಿವಮೂರ್ತಿ ಕಿರಿಯ BESCOM (JE) 9008304680 — [signature]

9) Huchappa. G. 9880110461 — [signature]

10) Ravi 9901214426 — RAVI

11) Chandra Setty. Marshall - 9164033111 [signature]

12) Venugopal. PA. 9900414107. — [signature]

13) H.V SRIDHARA RI 7829323867 — [signature]

(14) ರಾಕೇಶ — Rakesh 97402434[illegible]

15 Dhanvanth AE (MHY) (BW5583) 776096367[illegible]

(16) Vinod LHC YEAmlur 9611249766

(17) Aravind Marathahalli 984576448[illegible]

(18) S.PRasad [S.PRAMOD REDDY] Maradhalli 98450435[illegible]

**"ದಿನಾಂಕ:20.02.2021ರ ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.86ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು"**

..................

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ ಆರ್/35/2020-21, ದಿನಾಂಕ:02.10.2020ರಂತೆ ದಿನಾಂಕ: 20.02.2021ರ ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.86ರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿ ಶ್ರೀ. ಅರುಣ್ ರವರ ಅಧ್ಯಕ್ಷತೆಯಲ್ಲಿ ನಡೆದ ಮಾಸಿಕ ಮೂರನೇ ವಾರದ ಸಮಿತಿ ಸಭೆಗೆ ಹಾಜರಾದ ಅಧಿಕಾರಿ ಸಿಬ್ಬಂದಿಗಳು ಮತ್ತು ವಾರ್ಡ್ ಸಮಿತಿ ಸಭೆಯ ಸದಸ್ಯರುಗಳು ಹಾಗೂ ಸದರಿ ಸಭೆಯ ನಡವಳಿಗಳು.

| ಕ್ರ. ಸಂ | ಸಭೆಗೆ ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿಗಳು/ಸದಸ್ಯರುಗಳು | ಹುದ್ದೆ |
|---|---|---|
| 1 | ಶ್ರೀ.ಅರುಣ್ (ಸ.ಕಾ.ಅ) | ನೋಡೆಲ್ ಅಧಿಕಾರಿಗಳು |
| 2 | ಶ್ರೀ.ಮುನಿಯಪ್ಪ.ಸಿ | ಸಹಾಯಕ ಅಭಿಯಂತರರು |
| 3 | ಶ್ರೀ.ಮಂಜುನಾಥ್ | ಶಕ್ತಿ ಕೇಂದ್ರ ಅಧ್ಯಕ್ಷರು |
| 4 | ಶ್ರೀ.ಮೆಹಬೂಬ್ ಪಾಷ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.86 |
| 5 | ಶ್ರೀ.ರಮೇಶ್ | ಕಂದಾಯ ಪರಿವೀಕ್ಷಕರು |
| 6 | ಶ್ರೀ.ಸದಾನಂದ್ | ಶಕ್ತಿ ಕೇಂದ್ರ ಅಧ್ಯಕ್ಷರು |
| 7 | ಶ್ರೀಮತಿ.ಹೆಚ್ ಶೋಭ | ಕಲ್ಯಾಣ ಇಲಾಖೆ |
| 8 | ಶ್ರೀ.ಕೇಶವ ಮೂರ್ತಿ | ಕಿರಿಯ ಅಭಿಯಂತರರು (ಬೆಸ್ಕಾಂ) |
| 9 | ಶ್ರೀ.ಹುಚ್ಚಪ್ಪ. ಪಿ | ಸಂಚಾರಿ ಪೋಲಿಸ್ ಇಲಾಖೆ |
| 10 | ಶ್ರೀ.ರವಿ | ಸಂಚಾರಿ ಪೋಲಿಸ್ ಇಲಾಖೆ |
| 11 | ಶ್ರೀ.ಚಂದ್ರ ಶೆಟ್ಟಿ | ಮಾರ್ಷಲ್ |
| 12 | ಶ್ರೀ.ವೇಣುಗೋಪಾಲ್ ಪಿ.ಎ | ಶಕ್ತಿ ಕೇಂದ್ರ ಅಧ್ಯಕ್ಷರು |
| 13 | ಶ್ರೀ.ಹೆಚ್.ವಿ. ಶ್ರೀಧರ್ | ಕಂದಾಯ ನಿರೀಕ್ಷರು |
| 14 | ಶ್ರೀ.ರಾಕೇಶ್ | ಬೀದಿ ದೀಪ ನಿರ್ವಾಹಕರು |
| 15 | ಶ್ರೀ.ಧನ್ವಂತ್ | ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 16 | ಶ್ರೀಮತಿ. ವಿಮಲ ಹೆಚ್.ಸಿ | ಶಕ್ತಿ ಕೇಂದ್ರ ಅಧ್ಯಕ್ಷರು |
| 17 | ಶ್ರೀ.ಅರವಿಂದ್ | ಶಕ್ತಿ ಕೇಂದ್ರ ಅಧ್ಯಕ್ಷರು |
| 18 | ಶ್ರೀ.ಪ್ರಮೋದ್ ರೆಡ್ಡಿ | ವಾರ್ಡ್ ಅಧ್ಯಕ್ಷರು |

ಮಾನ್ಯ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

**ಆರೋಗ್ಯ ಇಲಾಖೆ**

1. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19ಗೆ ಸಂಬಂಧಿಸಿದಂತೆ ಟೆಸ್ಟ್‌ಗಳನ್ನು ಪ್ರತಿದಿನ (ಮಾರತ್ತಹಳ್ಳಿ ಮತ್ತು ಯಮಲೂರು) ಆರೋಗ್ಯ ಕೇಂದ್ರಗಳಿಗೆ ಟಾರ್ಗೆಟ್ ನಂತೆ ಪ್ರಗತಿ ಸಾಧಿಸಲು ಅಧಿಕಾರಿಗಳಿಗೆ ಸೂಚಿಸಿಲಾಯಿತು.
2. ವಾರ್ಡ್‌ನಲ್ಲಿ ಎಲ್ಲೆಂದರಲ್ಲಿ ಮಾಸ್ಕ್ ಹಾಕದೇ ಓಡಾಡುವ ಸಾರ್ವಜನಿಕರಿಗೆ ಮಾರ್ಷಲ್‌ಗಳು ದಂಡ ವಿಧಿಸುವಂತೆ ಸೂಚಿಸಿರುತ್ತಾರೆ.

3. ಪಿ.ಜಿ.ಗಳು ಕಸದ ಬುಟ್ಟಿಗಳನ್ನು ತುಂಬಾ ದಿನಗಳಿಂದ ಹೊರಗೆ ಇಡುವುದರಿಂದ ಇದು. ಪಿ.ಜಿ.ಗಳು ಕಸವನ್ನು ಚೆಲ್ಲಿ ಹೊರಗೆ ಹಾಕುತ್ತಿರುವ ಬಗ್ಗೆ ಶ್ರೀ.ವೇಣುಗೋಪಾಲ್ ರವರು ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ

**ಕಾಮಗಾರಿ ವಿಭಾಗ**

1. ವಾರ್ಡಿನ ಅಣ್ಣಮ್ಮನಗರದ ಟ್ರಬ್‌ಬಾಕ್ಸ್ ತೆರವುಗೊಳಿಸುವ ಬಗ್ಗೆ ಶ್ರೀ.ವೇಣುಗೋಪಾಲ್ ಶಕ್ತಿ ಕೇಂದ್ರ ಅಧ್ಯಕ್ಷರು ತಿಳಿಸಿರುತ್ತಾರೆ
2. ಶಕ್ತಿ ಕೇಂದ್ರ ಅಧ್ಯಕ್ಷರುಗಳಾದ ಶ್ರೀ.ಮಂಜುನಾಥ್, ಶ್ರೀ.ಸದಾನಂದ್ ಮತ್ತು ಶ್ರೀ.ವೇಣುಗೋಪಾಲ್ ರವರು ವಾರ್ಡ್‌ನ ವ್ಯಾಪ್ತಿಯಲ್ಲಿರುವ ಮಿಸ್ಸಿಂಗ್ ಸ್ಲ್ಯಾಬ್‌ಗಳನ್ನು ಗುರುತಿಸಿ ಅದನ್ನು ಮುಚ್ಚಲು ತಿಳಿಸಿರುತ್ತಾರೆ.
3. ತುಳಸಿ ಥಿಯೇಟರ್ ರಸ್ತೆ, 2ನೇ ಅಡ್ಡರಸ್ತೆಯಲ್ಲಿ ಈಗಾಗಲೇ ತೆರೆದಿರುವ ಚರಂಡಿಯನ್ನು ಕೂಡಲೇ ಮುಚ್ಚಬೇಕೆಂದು ಶ್ರೀ. ಅರವಿಂದ್ (ಶಕ್ತಿ ಕೇಂದ್ರ ಅಧ್ಯಕ್ಷರು) ಸಭೆಯಲ್ಲಿ ತಿಳಿಸಿರುತ್ತಾರೆ.

**ಬೆಸ್ಕಾಂ ಇಲಾಖೆ**

1. ಮಾರತ್ತಹಳ್ಳಿ. ತುಳಸಿ ಥಿಯೇಟರ್ ರಸ್ತೆಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ರಸ್ತೆಗೆ ಅಡ್ಡಲಾಗಿರುವುದರಿಂದ ಅದನ್ನು ತೆರವುಗೊಳಿಸಬೇಕೆಂದು ಶಕ್ತಿ ಕೇಂದ್ರ ಅಧ್ಯಕ್ಷರಾದ ಶ್ರೀ.ಅರವಿಂದ್ ರವರು ತಿಳಿಸಿರುತ್ತಾರೆ.

**ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ**

1. ವಾರ್ಡ್ ವ್ಯಾಪ್ತಿಯಲ್ಲಿ ಇರುವ ಕೊಡಿಗೆಹಳ್ಳಿ ಕೃಷ್ಣಪ್ಪ ರಸ್ತೆಯಲ್ಲಿ ಉಳಿದಿರುವ UGD ಪೈಪ್‌ಲೈನ್ ಕಮಗಾರಿಯನ್ನು ಪೂರ್ಣಗೊಳಿಸಲು ಬಿಡಬ್ಲ್ಯೂಎಸ್‌ಎಸ್‌ಬಿ ಸಹಾಯಕ ಅಭಿಯಂತರರು ರವರಿಗೆ ತಿಳಿಸಿರುತ್ತಾರೆ.
2. ರಾಜು ಕಾಲೋನಿಯಲ್ಲಿ UGD ಪೈಪ್‌ಲೈನ್ ಕಾಮಗಾರಿಗಾಗಿ ಸುಮಾರು ವರ್ಷಗಳ ಹಿಂದೆಯೇ ಕಾಮಗಾರಿ ಪೂಜೆ ನಡೆಸಿದ್ದು. ಇದುವರೆಗೂ ಸದರಿ ಕಾಮಗಾರಿ ಪ್ರಾರಂಭಿಸಿರುವುದಿಲ್ಲ ಆದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಶ್ರೀಮತಿ. ವಿಮಲ ರವರು ತಿಳಿಸಿರುತ್ತಾರೆ.
3. UGD ಪೈಪ್‌ಲೈನ್ ಅನ್ನು ಚರಂಡಿಗೆ ಕೊಡದೆ ಮ್ಯಾನ್ ಹೋಲ್ ಚೇಂಬರ್‌ಗೆ ಸಂಪರ್ಕ ಕೊಡಬೇಕೆಂದು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
4. ರಂಗನಾಥ ಸ್ವಾಮಿ ದೇವಸ್ಥಾನದ ಹಿಂಭಾಗ ಉಳಿದಿರುವ ಚರಂಡಿ ಮತ್ತು ರಸ್ತೆ ಕಾಮಗಾರಿಯನ್ನು ಕೂಡಲೇ ಆರಂಭಿಸಿ ಪೂರ್ಣಗೊಳಿಸಬೇಕೆಂದು ಶ್ರೀಮತಿ. ವಿಮಲ ರವರು ತಿಳಿಸಿರುತ್ತಾರೆ.
5. 7ನೇ ಅಡ್ಡರಸ್ತೆ, ಚೌಡೇಶ್ವರಿ ಬಡಾವಣೆಯಲ್ಲಿ UGD ಪೈಪ್‌ಲೈನ್ ಬದಲಾಯಿಸುವ ಬಗ್ಗೆ ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಿಳಿಸಿರುತ್ತಾರೆ.

__ಸಂಚಾರ ದಟ್ಟಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ__:- ಮಾರತ್ತಹಳ್ಳಿಯ ಕಳಾಮಂದಿರ ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಸರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಶ್ರೀ.ವೇಣುಗೋಪಾಲ್ ಶಕ್ತಿ ಕೇಂದ್ರ ಅಧ್ಯಕ್ಷರು ತಿಳಿಸಿರುತ್ತಾರೆ.

__ಪಶುಸಂಗೋಪನಾ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ__:- ವಾರ್ಡ್‌ನಲ್ಲಿ ಬೀದಿನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬಗ್ಗೆ ಕ್ರಮ ವಹಿಸಬೇಕೆಂದು ಶ್ರೀ.ಮಂಜುನಾಥ್ ರವರು ತಿಳಿಸಿರುತ್ತಾರೆ. ಈ ಬಗ್ಗೆ ಮುಂದಿನ ಸಭೆಯಲ್ಲಿ ಪಶುಸಂಗೋಪನಾ ಇಲಾಖೆಯವರು ಹಾಜರಾಗಲು ಮಾನ್ಯ ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.

ಕಲ್ಯಾಣ ಇಲಾಖೆ 2019-20ನೇ ಸಾಲಿನ ಯೋಜನೆಯಡಿಯಲ್ಲಿ ಇಲಾಖೆ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಮತ್ತು ಅಂಗವಿಕಲರಿಗೆ ನಾಲ್ಕು ಚಕ್ರದ ವಾಹನ (ಬೈಕ್), ಹಾಗೂ ಟೈಲರಿಂಗ್ ತರಬೇತಿ ಪಡೆದಿರುವವರಿಗೆ ಉಚಿತ ಹೊಲಿಗೆ ಯಂತ್ರಗಳನ್ನು ನೀಡಲಾಗುವುದು ಎಂದು ಶ್ರೀಮತಿ. ಹೆಚ್.ಕೋಲ್ಲ (ಕಲ್ಯಾಣ ಇಲಾಖೆ) ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಗೇಲ್ ಗ್ಯಾಸ್ ರವರು ವಾರ್ಡಿನಾದ್ಯಂತ ಎಲ್ಲೆಂದರಲ್ಲಿ ರಸ್ತೆಯನ್ನು ಅಗೆದು ಮತ್ತು ಅದನ್ನು ಮುಚ್ಚದೇ ಹಾಗೆಯೇ ಬಿಟ್ಟಿರುತ್ತಾರೆ ಎಂದು ಮಾರ್ಷಲ್ ಸಭೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟವರನ್ನು ಮುಂದಿನ ಸಭೆಯಲ್ಲಿ ಹಾಜರಾಗಬೇಕೆಂದು ಮಾನ್ಯ ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

2021-22ನೇ ಸಾಲಿನ ಬಜೆಟ್ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದು ಕೊಳ್ಳಲು ಸಭೆಯಲ್ಲಿ ಎಲ್ಲಾ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಸಲಹೆಗಳನ್ನು ನೀಡಿರುತ್ತಾರೆ.

**ವಿವರಗಳು ಈ ಕೆಳಕಂಡಂತಿವೆ.**

1. ವಾರ್ಡ್‌ನ ಮಂಜುನಾಥ ನಗರ ಸ್ಮಶಾನದಲ್ಲಿ ಅವಶ್ಯಕತೆ ಇರುವ ಹೊಸ Cistern Tank ನಿರ್ಮಿಸುವ ಬಗ್ಗೆ ಶ್ರೀ.ಅರವಿಂದ್ ಶಕ್ತಿ ಕೇಂದ್ರ ಅಧ್ಯಕ್ಷರು ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದು ಮತ್ತು ಬೋರ್‌ವೆಲ್ ರಿಪೇರಿಗಾಗಿ ಅನುದಾನ ಮಂಜೂರು ಮಾಡಲು ಶಕ್ತಿಕೇಂದ್ರ ಅಧ್ಯಕ್ಷರು ಸಭೆಯಲ್ಲಿ ಚರ್ಚಿಸಿರುತ್ತಾರೆ.
3. ವಾರ್ಡ್‌ನಲ್ಲಿ 150 ಹೊಸ ಬೀದಿ ದೀಪಗಳನ್ನು ಅಳವಡಿಸಲು ಚರ್ಚಿಸಿರುತ್ತಾರೆ.
4. ತುಳಸಿ ಥಿಯೇಟರ್ ರಸ್ತೆ ಇಂದ ಎಸ್.ಬಿ.ಆರ್ ಪ್ಯಾಲೆಸ್ ಮತ್ತು ಮೋರ್ ಮೆಘಾಸ್ಟೋರ್ ಇಂದ ವಾಸವಿ ಅಪಾರ್ಟ್‌ಮೆಂಟ್‌ನ ವರೆಗೆ ಹೊಸ ಆರ್.ಸಿ.ಸಿ ಚರಂಡಿಯನ್ನು ನಿರ್ಮಿಸಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
5. ಮಾರತ್ತಹಳ್ಳಿ ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶದಲ್ಲಿ ಹೊಸ ಬೀದಿ ದೀಪದ ಕಂಬ(ಪೋಲ್)ಗಳನ್ನು ಅಳವಡಿಸಲು ಶ್ರೀಮತಿ.ವಿಮಲ ರವರು ಕೇಳಿರುತ್ತಾರೆ.

ಮಾನ್ಯ ನೋಡೆಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು,
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 86 ಮಾರತ್ತಹಳ್ಳಿ.

ಅಧ್ಯಕ್ಷರು,
ನೋಡೆಲ್ ಅಧಿಕಾರಿ
ವಾರ್ಡ್ ನಂ. 86 ಮಾರತ್ತಹಳ್ಳಿ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ಬಿಬಿಎಂಪಿ ರವರ ಘನ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ವಿಭಾಗ, Domlur I Stage, Domlur, Bengaluru-560071. ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ವಿಭಾಗ, ಮಾರತ್ತಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರು, ಮಾರತ್ತಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.


Created with free
version of GPS
Camera 55


Created with free
version of GPS
Camera 55